**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

ಸಾಕ್ಷಿದಾರರ ಹೆಸರು : ಉಮೇಹಾನಿ ಅಮೀರ ಮುಲ್ತಾನಿ

ವಯಸ್ಸು : 28 ವರ್ಷ

ಉದ್ಯೋಗ : ಮನೆ ಕೆಲಸ

ಸಾಕೀನ : ಕೌಜಲಗಿ

ದಿಃ **27-09-2023** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಿಂದ

ಎದುರುದಾರ ನನ್ನ ಗಂಡ ಆಗಿರುತ್ತಾನೆ. ನನ್ನ ಹಾಗೂ ಎದುರುದಾರರ ಮದುವೆ ದಿಃ 13-12-2017 ರಂದು ಮುಲ್ತಾನಪೂರ ಕಬ್ಬೂರದಲ್ಲಿ ಆಗಿರುತ್ತದೆ. ನಮ್ಮ ಮದುವೆ ನಮ್ಮ ಜಾತಿ ರಿವಾಜ ಪ್ರಕಾರ ಆಗಿರುತ್ತದೆ. ಮದುವೆ ಆದ ನಂತರ ನಾನು ಬಾಳ್ವೆ ಮಾಡಲು ಅವರ ಮನೆಗೆ ಹೋಗಿರುತ್ತೇನೆ. ನಾನು ಅವರ ಮನೆಯಲ್ಲಿ ಒಂದೂವರೆ ವರ್ಷ ಬಾಳ್ವೆ ಮಾಡಿರುತ್ತೇನೆ. ಒಂದೂವರೆ ವರ್ಷದ ನಂತರ ಎದುರುದಾರ ನನ್ನನ್ನು ಹೊಡಿ ಬಡಿ ಮಾಡುವುದು ಹಾಗೂ ನನಗೆ ಕಿರುಕುಳ ನೀಡುವುದು ಮಾಡುತ್ತಿದ್ದರು. ಎದುರುದಾರ ನಮ್ಮ ತವರು ಮನೆಯಿಂದ ಬಂಗಾರ ಹಾಗೂ ಹಣವನ್ನು ತೆಗೆದುಕೊಂಡು ಬರಲು ನನಗೆ ಕಿರುಕುಳ ನೀಡುತ್ತಿದ್ದರು. ಎದುರುದಾರನಿಗೆ ಹಸಿನಾ ಎನ್ನುವವರ ಜೊತೆಗೆ ಅನೈತಿಕ ಸಂಬಂಧವಿದ್ದು ಸದರಿ ಅವರು ನನ್ನನ್ನು ಹೊಡಿ ಬಡಿ ಮಾಡುತ್ತಿದ್ದರು.

ಸದರಿ ವಿಷಯವನ್ನು ನಮ್ಮ ತಂದೆ ತಾಯಿಯವರಿಗೆ ತಿಳಿಸಿದ ನಂತರ ಸದರಿ ಅವರು ಎದುರುದಾರನಿಗೆ ಬುದ್ದಿ ಮಾತು ಹೇಳಲು ಕೌಜಲಗಿ ಗ್ರಾಮದ ರಂಜಾನಸಾಬ ಮುಲ್ತಾನಿ, ದಸ್ತಗಿರ ಮುಲ್ತಾನಿ ಹಾಗೂ ನಮ್ಮ ತಂದೆಯವರು ಹೋಗಿದ್ದರು. ಆದರು ಕೂಡಾ ಎದುರುದಾರ ಸುಧಾರಿಸಿರುವುದಿಲ್ಲ. ಆನಂತರ ಎದುರುದಾರ ನನ್ನನ್ನು ಹೊಡಿ ಬಡಿ ಮಾಡಿ ನಮ್ಮ ಮನೆಯಿಂದ ಹೊರ ಹಾಕಿರುತ್ತಾರೆ ಅದಿನಿಂದ ನಾನು

ನಮ್ಮ ತವರು ಮನೆಯ ಹತ್ತಿರ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ. ಎದುರುದಾರ ನನ್ನನ್ನು ಮನೆಯಿಂದ ಹೊರ ಹಾಕಿ 4 ವರ್ಷಗಳು ಆಗಿರುತ್ತವೆ. ಅದಿನಿಂದ ಇಲ್ಲಿಯವರೆಗೂ ನಾನು ನನ್ನ ತವರು ಮನೆ ಹತ್ತಿರ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ.

ನಮ್ಮ ತಂದೆ ತಾಯಿಯವರು ಬಡವರಾಗಿದ್ದು ಸದರಿ ಅವರಿಗೆ ನನ್ನನ್ನು ನೋಡಿಕೊಳ್ಳುವ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ. ನಮ್ಮ ತಂದೆ ತಾಯಿಯವರಿಗೆ ಯಾವುದೆ ಹೊಲ ಮನೆ ಇರುವುದಿಲ್ಲ. ನನ್ನ ಗಂಡ ಕುರಿ ವ್ಯಾಪಾರ ಮಾಡುತ್ತಾರೆ. ಸದರಿ ಅವರು ಮೂಡಲಗಿ, ರಾಯಭಾಗ ಹಾಗೂ ಬೇರೆ ಬೇರೆ ಊರುಗಳಿಗೆ ಹೋಗಿ ಕುರಿ ವ್ಯಾಪಾರ ಮಾಡುತ್ತಾರೆ. ಸದರಿ ಕುರಿ ವ್ಯಾಪಾರದಿಂದ ಎಲ್ಲಾ ಖರ್ಚುಗಳನ್ನು ತೆಗೆದು ಎದುರುದಾರನಿಗೆ ದಿನಕ್ಕೆ ರೂ.2,000/- ಆದಾಯ ಬರುತ್ತದೆ. ನಾನು ಕೇವಲ ಮನೆಯ ಕೆಲಸವನ್ನು ಮಾಡುತ್ತಿದ್ದು ಹೊರಗೆ ದುಡಿಯಲು ಹೊಗಲು ಆಗುವುದಿಲ್ಲ. ಈಗ ಎದುರುದಾರ ನನಗೆ ಪ್ರತಿ ತಿಂಗಳು ಪೋಟಗಿ ಕೊಡಬೇಕು ಎಂದು ಕೇಳಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ.

ನ್ಯಾಯಾಲಯಕ್ಕೆ ಎದುರುದಾರ ಹಾಗೂ ನನ್ನ ಮದುವೆಯ ಆಮಂತ್ರಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು, ಸಗಾಯಿ ಯಾದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು, ಈ ದಿನ ನಮ್ಮ ತಂದೆಯವರು ಸರಕಾರದಿಂದ ನಮ್ಮ ಮದುವೆಗಾಗಿ ಪಡೆದುಕೊಂಡಿರುವ ಹಣ ಸಹಾಯದ ಅಫಿಡವಿಟವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಅರ್ಜಿದಾರ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಕಾರಣಗಳು ಕಂಡು ಬಂದ ಮೇರೆಗೆ ಮುಖ್ಯ ವಿಚಾರಣೆ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ಶ್ರೀಮತಿ. ಸೂರ್ಯ ಪ್ರಭಾ ಎಚ್.ಡಿ)**
**ಹೆ.ದಿ.&ನ್ಯಾದಂ., ಗೋಕಾಕ.**